**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 32/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 10**

**ದಿನಾಂಕಃ 18.03.2026** **ಸಿಡಬ್ಲ್ಯೂ 15**

| | |
|---|---|
| ಹೆಸರು | ರವಿಕುಮಾರ ಡಿ |
| ತಂದೆ ಹೆಸರು | ಡಿಳ್ಳೆಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಪಿ ಎಸ್ ಐ |
| ವಾಸ ಸ್ಥಳ | ಹಾವೇರಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸನ್ ಜನವರಿ 2018 ರಿಂದ ಆಗಸ್ಟ 2021 ರವರೆಗೆ ಹರಿಹರ ಗ್ರಾಮಾಂತರ ಪೊಲೀಸ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 07.10.2021 ರಂದು ಮಲೆಬೆನ್ನೂರು ಠಾಣೆಯ ಸಂಖ್ಯೆ 68/2021 ರಲ್ಲಿ ನಾಗರಾಜ ಮತ್ತು ರಾಯಪ್ಪ 2 ಆರೋಪಿತರನ್ನು ವಶಕ್ಕೆ ಪಡೆದುಕೊಂಡಿದ್ದು ಕೃತ್ಯ ನಡೆದ ಸ್ಥಳವಾದ ಕೊಂಡಜ್ಜಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಗುಮಾಸ್ತರ ಕೊಠಡಿಯಿಂದ ಕಳ್ಳತನವಾದ ಎಣ್ಣೆಯ ಪ್ಯಾಕೆಟಗಳ ಕಳ್ಳತನ ಮಾಡಿದ ಜಾಗದಲ್ಲಿ ಚಾಸಾ.7 ಮತ್ತು 8 ರವರ ಸಮಕ್ಷಮ ಮದ್ಯಾಹ್ನ 3.15 ರಿಂದ 4.15 ರವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಜರುಗಿಸಲು ಆರೋಪಿತರೇ ಕಳ್ಳತನ ಮಾಡಿದ ಜಾಗೆಯನ್ನು ತೋರಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ.9 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.9 (ಬಿ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಛಾಯ ಚಿತ್ರ ತೆಗೆದಿದ್ದು ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ.7 ಮತ್ತು 8 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅದೇ ದಿನ ಚಾಸಾ.9 ರಿಂದ 12 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 08.10.2022 ರಂದು ಚಾಸಾ.14 ರವರಿಂದ 65 ಬಿ ಪ್ರಮಾಣ ಪತ್ರ ಪಡೆದಿರುತ್ತೇನೆ. ಸಾಕ್ಷಿಯು ಗುರುತಿಸಿದ 65 (ಬಿ) ಪ್ರಮಾಣ ಪತ್ರದ ದೃಡೀಕೃತ ನಕಲನ್ನು ನಿಪಿ.13 ಎಂದು ಸಾಕ್ಷಿಯ ಸಹಿಯನ್ನು ನಿಪಿ.13 (ಎ) ಎಂದು ಗುರುತಿಸಲಾಯಿತು.

ದಿಃ 17.02.2021 ರಂದು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಈಶ್ವರ ಕುಮಾರ ರವರ ಸ್ವಇಚ್ಛಾ ಹೇಳಿಕೆ ಪಡೆದಿರುತ್ತೇನೆ.

ದಿಃ 08.05.2022 ರಂದು ಪ್ರಕರಣಕ್ಕೆ ಸಂಬಂದಿಸಿದ ದಾಖಲಾತಿಗಳನ್ನು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ದಾಖಲಾತಿಗಳನ್ನು ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಈ ದಿನ ಇದ್ದಾರೆ. 2 ನೇ ಆರೋಪಿ ಈ ದಿನ ಗೈರು ಹಾಜರಿದ್ದು ಅವರ ಗುರುತಿಸುವಿಕೆ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ಅವರ ಪರ ವಕೀಲರು ನುಡಿದಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ಕೊಂಡಜ್ಜಿ ಗ್ರಾಮ ನಮ್ಮ ಮಲೆಬೆನ್ನೂರು ಠಾಣಾ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿ. ನಮ್ಮ ವ್ಯಾಪ್ತಿಗೆ ಒಳಪಡದ ಕ್ಷೇತ್ರದ ತನಿಖೆಯನ್ನು ಮಾಡಲು ಸಂಬಂದಪಟ್ಟ ವ್ಯಾಪ್ತಿ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೌಖಿಕವಾಗಿ ಮಾಹಿತಿ ನೀಡಿದ್ದೇವೆ ಎಂದು ನುಡಿಯುತ್ತಾರೆ. ಚಾಸಾ.7 ಮತ್ತು 8 ಕೊಂಡಜ್ಜಿ ಗ್ರಾಮದ ವಾಸಿಗಳಲ್ಲ ಎಂದರೆ ಸರಿ. ಚಾಸಾ.7 ಮತ್ತು 8 ರವರಿಗೆ ನೋಟಿಸ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ. 9 ರಲ್ಲಿ ನನ್ನೊಂದಿಗೆ ಇದ್ದ ನಮ್ಮ ಸಿಬ್ಬಂದಿಯವರ ಸಹಿ ಇಲ್ಲ ಎಂದರೆ ಸರಿ. ನಿಪಿ.9 ನ್ನು ಯಾವ ರೀತಿ ತಯಾರಿಸಿರುತ್ತಾರೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ.9 ರಲ್ಲಿರುವ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿ. ಸ್ಥಳಕ್ಕೆ ನಾನು ಬೇಟಿ ನೀಡಿದ ಸಂದರ್ಭದಲ್ಲಿ ಸ್ಥಳದಲ್ಲಿ ನಡೆದ ಘಟನೆ ಹಾಗೂ ಅದಕ್ಕೆ ಸಂಬಂದಿಸಿದ ದೂರಿನ ಬಗ್ಗೆ ತಿಳಿದುಕೊಂಡಿದ್ದೇನೆ. ಚಾಸಾ.1 ರವರು ನೀಡಿದ್ದು ಎಂದು ಹೇಳಲಾದ ದೂರನ್ನು ನಾನು ತಿಳಿದುಕೊಂಡಿದ್ದೇನೆ. ನಿಪಿ.1 ರಲ್ಲಿ ಕಿಟಕಿಯ ಗಾಜನ್ನು ಒಡೆದು ಕಳುವು ಮಾಡಲಾಗಿತ್ತು ಎಂದು ನಮೂದಿಸಲಾಗಿದೆ ಎಂದರೆ ಸರಿ. ಆದರೆ ನಿಪಿ.9 ರಲ್ಲಿ ಕೋಣೆಯ ಬೀಗವನ್ನು ಒಡೆದು ಕಳುವು ಮಾಡಿದ್ದಾರೆ ಎಂದು ನಮೂದು ಇದೆ ಎಂದರೆ ಸರಿ. ಈ ರೀತಿ ಚಾಸಾ.1 ರವರು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಮನೆ ಎಂದರೆ ಬೇರೆ ಹಾಗೂ ಶಾಲಾ ಕೊಠಡಿ ಎಂದರೆ ಬೇರೆ ಎಂದರೆ ಸರಿ. ನಿಪಿ.9 ರಲ್ಲಿ ಮನೆಯನ್ನು ಪರಿಶೀಲಿಸಲಾಗಿ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಪ್ಪಾಗಿ ಬೆರಳಚ್ಚು ಆಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ.9 ರಲ್ಲಿ ಮನೆ ಚೆಕ ಬಂದಿ ಎಂದು ನಮುದು ಇದೆ ಎಂದರೆ ಸರಿ. ನಿಪಿ.9 ರಲ್ಲಿ 2 ನೇ ಆರೋಪಿ ಬಗ್ಗೆ ಹೇಳಿಲ್ಲ ಎಂದರೆ ಸಾಕ್ಷಿಯು ಆ ಸಂದರ್ಭದಲ್ಲಿ ರಾಯಪ್ಪ ಸಿಕ್ಕಿರಲ್ಲಿ ಎಂದು ನುಡಿಯುತ್ತಾರೆ. ನಿಪಿ.9 ರಲ್ಲಿ ನಾಗರಾಜ ಮತ್ತು ಇಬ್ಬರು ಕೆಳಗೆ ಇಳಿದು ಕೊಠಡಿಗೆ ಹೋಗಿರುತ್ತಾರೆ ಎಂದು ಹೇಳಿದ್ದು ಸದರಿಯವರು ಇಬ್ಬರು ಯಾರು ಎಂದು ನಮೂದಿಸಿಲ್ಲ ಎಂದರೆ ಸರಿ. ಚಾಸಾ.1 ರವರು ಗುಮಾಸ್ತರ ಕೊಠಡಿಯಲ್ಲಿ ಕಳ್ಳತನವಾದ ಬಗ್ಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ಕಿಟಕಿ ಒಡೆದ ಬಗ್ಗೆ ಅಥವಾ

ಕಿಟಕಿಯ ಇದ್ದ ಬಗ್ಗೆ ಕಾಣುತ್ತಿಲ್ಲ ಎಂದರೆ ಸರಿ. ಅದೇ ರೀತಿ ಯಾವ ಯಾವ ದಿನಸಿಗಳು ಸ್ಥಳದಲ್ಲಿ ಇದ್ದವು ಎಂದು ಕಾಣುತ್ತಿಲ್ಲ ಎಂದರೆ ಸರಿ. ಸಾಕ್ಷಿದಾರರ ಹೇಳಿಕೆ ಪಡೆಯಲು ಅವರಿಗೆ ನೋಟಿಸ ನೀಡಿದ್ದೇವೆ. ಸಾಕ್ಷಿಯು ಮುಂದುವರೆದು ಪಂಚನಾಮೆ ದಿನವೇ ಅವರ ಹೇಳಿಕೆ ಪಡೆದುಕೊಂಡಿದ್ದೆವು ಎಂದು ನುಡಿಯುತ್ತಾರೆ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಬಗ್ಗೆ ನಿಪಿ.9 ರಲ್ಲಿ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ಸದರಿ ಬಾಲಕನ ಪಾತ್ರ ಪ್ರಕರಣದಲ್ಲಿ ಏನು ಎಂಬ ಬಗ್ಗೆ ಯಾವುದೇ ಸಂಗತಿ ಇಲ್ಲ ಎಂದರೆ ಸರಿ. ನಿಪಿ.9 ರಲ್ಲಿ ಚಾಸಾ.17 ರವರ ಸಹಿಯನ್ನು ಪಡೆದಿಲ್ಲ ಎಂದರೆ ಸರಿ. ದಿಃ 01.10.2021 ರಂದು 1 ನೇ ಆರೋಪಿಯನ್ನು ನಾನು ದಸ್ತಗಿರಿ ಮಾಡಿದ್ದೆನು. ನಂತರ ದಿಃ 07.10.2021 ರಂದು ಪಂಚನಾಮೆಯನ್ನು ಮಾಡಿರುತ್ತೀರಿ ಎಂದರೆ ಸಾಕ್ಷಿಯು ಅವರನ್ನು ನ್ಯಾಯಾಂಗ ಬಂಧನಕ್ಕೆ ಸಲ್ಲಿಸಿ ನಂತರ ಪೊಲೀಸ ಅಭಿರಕ್ಷೆ ಪಡೆದು ಪಂಚನಾಮೆ ಮಾಡಿದ್ದೇವೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಹೇಳಿಕೆಯನ್ನು ಪ್ರಶ್ನೆ ಮತ್ತು ಉತ್ತರ ರೂಪದಲ್ಲಿ ಪಡೆದಿಲ್ಲ ಎಂದರೆ ಸರಿ. ಪಂಚನಾಮೆ ಜರುಗಿಸಿದ ಸ್ಥಳದ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿಲ್ಲ. ಸ್ಥಳಕ್ಕೆ ನಾವು ಪೊಲೀಸ ಜೀಪಿನಲ್ಲಿ ಹೋಗಿದ್ದೆವು ಎಂಬ ಬಗ್ಗೆ ಛಾಯ ಚಿತ್ರ ತೆಗೆದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ದವಸ ಧಾನ್ಯಗಳನ್ನು ಗುಮಾಸ್ತರ ಕೊಠಡಿಯಲ್ಲಿ ಇಡುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆದರೆ ಘಟನಾ ಕಾಲಕ್ಕೆ ಅಲ್ಲಿ ಧಾನ್ಯಗಳನ್ನು ಇಟ್ಟಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ಚಾಸಾ.1 ರವರು ದೂರಿನಲ್ಲಿ ಗುಮಾಸ್ತರ ಕೊಠಡಿಯಲ್ಲಿ ಇಟ್ಟ ಬಗ್ಗೆ ಹೇಳಿಲ್ಲ ಎಂದರೆ ಸರಿ. ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ.7 ರವರ ಹೇಳಿಕೆಗಳನ್ನು ದಿಃ 06.10.2021 ರಂದು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ದಿನಾಂಕ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಚಾಸಾ.8 ರವರ ಹೇಳಿಕೆಗಳನ್ನು ದಿಃ 01.10.2021 ರಂದು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ದಿನಾಂಕ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಈ ರೀತಿ ತಪ್ಪಾದ ಬಗ್ಗೆ ನಾನು ನಿವೇದನೆ ಸಲ್ಲಿಸಿಲ್ಲ. ನಿಪಿ.9 ನ್ನು ಜರುಗಿಸುವ ಕಾಲಕ್ಕೆ ಕೋವಿಡ್ ಇತ್ತು ಎಂದರೆ ಸರಿ. ನಿಪಿ.9 ನ್ನು ಜರುಗಿಸುವ ಕಾಲಕ್ಕೆ ಪೊಲೀಸ ಸಿಬ್ಬಂದಿಯವರ ಹೇಳಿಕೆ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಂತರದ ದಿನ ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಪ್ರಕರಣಕ್ಕೋಸ್ಕರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

2 ನೇ ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ